(ದಿನಾಂಕಃ 02-07-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

ಪಾಟಿ ಸವಾಲು ಃ ಶ್ರೀ ಎಮ.ಆರ್.ಬಿ 1 ಮತ್ತು 4 ನೇ ಪ್ರತಿವಾದಿ ಪರ ವಕೀಲರಿಂದ - **ಅನುವಾದ ಶ್ರೀಮತಿ ಎ ಎಸ ಎಸ ವಕೀಲರಿಂದ**

ನಾವು ವಾದಿಗಳಿಗೆ ಮಾಡಲಗಿ ಎಂದು ಅಡ್ಡಹೆಸರು ಇದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡೆಸಿಲ್ಲ ಎಂದರೆ ಸರಿ. ನನ್ನ ಶಾಲಾ ಮತ್ತು ಇನ್ನಿತರ ದಾಖಲಾತಿಗಳಲ್ಲಿ ನನ್ನ ತಂದೆಯ ಹೆಸರು ಮಲ್ಲಿಕಾರ್ಜುನ ಕೋರೆ ಎಂದು ಇರುತ್ತದೆ ಎಂದರೆ ಸರಿ. ಅದೇ ನಮ್ಮ ಹೆಸರು ಮಹಾದೇವ ಮಲ್ಲಿಕಾರ್ಜುನ ಕೋರೆ, ಸುನೀಲ ಮಲ್ಲಿಕಾರ್ಜುನ ಕೋರೆ ಮತ್ತು ಲಿಂಬಾಬಾಯಿ ಮಲ್ಲಿಕಾರ್ಜುನ ಕೋರೆ ಎಂದು ಇರುತ್ತದೆ ಎಂದರೆ ಸರಿ. ಅದೇ ರೀತಿ ದಾಖಲಾತಿಗಳಲ್ಲಿ ನನ್ನ ಅಜ್ಜನ ಸಹ ಲಕ್ಷ್ಮಣ ಕೋರೆ ಎಂದು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣ ಉತಾರಿನಲ್ಲಿ ಅಜ್ಜನ ಹೆಸರು ಲಕ್ಷ್ಮಣ ಕೋರೆ ಎಂದು



ದಾಖಲೆ ಇರುತ್ತದೆ ಎಂದರೆ ಸರಿ. ಸದ್ರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸದ್ರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ದಾವಾ ಸ್ವತ್ತು ಸರ್ವೆ ನಂಬರ 72/1 ಅ ಈ ಮೊದಲು ಶಿವವ್ವಾ ತಿಪ್ಪಣ್ಣಾ ಮಾಡಲಗಿ ಮತ್ತು ಭೀಮಪ್ಪಾ ಯಲ್ಲಪ್ಪಾ ಮಾಡಲಗಿ ಇವರದು ಎಂದರೆ ನನಗೆ ಗೊತ್ತಿಲ್ಲ. ಸದ್ರಿ ತಿಪಣ್ಣಾ ತೀರಿಕೊಂಡ ನಂತರ ಆತನ ಹೆಂಡಡಿ ಶಿವವ್ವಾ ತಮ್ಮ ಭೀಮಪ್ಪಾ ಮಾಡಲಗಿ ಇವರ ಹೆಸರಿನಲ್ಲಿ 1354 ಡೈರಿಯಲ್ಲಿ ದಾಖಲ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಭೀಮಪ್ಪಾನಿಗೆ ಕರೆವ್ವಾ ಮತ್ತು ಸಿದ್ದವ್ವಾ ಎಂಬ ಇಬ್ಬರು ಹೆಂಡತಿಯರು ಎಂದರೆ ನನಗೆ ಗೊತ್ತಿಲ್ಲ. ಭೀಮಪ್ಪನಿಗೆ ಅಣ್ಣ ತಮ್ಮದದರು ಎಂದು ಆತ್ಮಾರಾಮ ಸಿದ್ದಪ್ಪಾ ಮಾಡಲಗಿ ಮತ್ತು ಕಲ್ಲಪ್ಪಾ ಮಾಡಲಗಿ ಎಂದು ಇದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ 72/1 ಅ ಈ ಮೊದಲು 22 ಎಕರೆ 02 ಗುಂಟೆ ಜಮೀನು ಇತ್ತು ಎಂದರೆ ಸರಿ. ಸದ್ರಿ 22 ಎಕರೆ 02 ಗುಂಟೆ ಜಮೀನ ಸಂಬಂಧ ವಾಟಣಿ ಕರೆಪ್ಪಾ ಭೀಮಪ್ಪಾ ಮಾಡಲಗಿ , ಸಿದ್ದಪ್ಪಾ ಭೀಮಪ್ಪಾ ಮಾಡಲಗಿ , ಆತ್ಮರಾಮ ಸಿದ್ದಪ್ಪಾ ಮಾಡಲಗಿ , ಕಲ್ಲಪ್ಪಾ ಲಕ್ಮ ಮಾಡಲಗಿ ಇವರ ನಡುವೆ 05 ಎಕರೆ 21 ಗುಂಟೆ ಮತ್ತು 05 ಎಕಡೆ 20 ಗುಂಟೆ ಎಂದು ವಾಟಣಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ನನ್ನ ತಾಯಿಗೆ ಗೊತ್ತಿರುತ್ತದೆ. ಸದ್ರಿ ವಾಟಣಿ ಪತ್ರ ಪ್ರಕಾರ ಕಲ್ಲಪ್ಪಾ ಲಕ್ಷ್ಮಣ ಮಾಡಲಗಿ ಅವರ ಹೆಸರಿನಲ್ಲಿ 05 ಎಕರೆ 21 ಗುಂಟೆಗೆ ದಾಖಲ ಆಗಿರುತ್ತದೆ ಎಂದರೆ

ಸುಳ್ಳು. ಸದ್ರಿ ದಾವೆಯಲ್ಲಿ ಕಲ್ಲಪ್ಪಾ ಲಕ್ಷ್ಮಣ ಮಾಡಲಗಿ ಇವರಿಗೆ 05 ಎಕರೆ 21 ಗುಂಟೆ ಜಮೀನು ಇದೆ ಎಂದು ಹೇಳಿರುತ್ತೇನೆ. ನನ್ನ ಪ್ರಕಾರ ಸದ್ರಿ ಜಮೀನು  ಕಲ್ಲಪ್ಪಾ ಲಕ್ಷ್ಮಣ ಮಾಡಲಗಿ ಇವರಿಗೆ ಹೇಗೆ ಬಂತು ಎಂದು ಗೊತ್ತಿಲ್ಲ. ಸದ್ರಿ ಜಮೀನು ಲಕ್ಷ್ಮಣ ಮಾಡಲಗಿ ಇವರ ಹೆಸರಿನಲ್ಲಿ ಜಮೀನು ಹೇಗೆ ಬಂತು ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿಲ್ಲ. ದಾವಾ ಸ್ವತ್ತು ದಾಖಲೆಯಲ್ಲಿ ಲಕ್ಷ್ಮಣ ಮಾಡಲಗಿ ಇವರ ಹೆಸರಿನಲ್ಲಿ ಇತ್ತು ಎಂದು ತಪ್ಪಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತಾರ ಯಾವ ಸಾಲಿನಲ್ಲಿ ಲಕ್ಷ್ಮಣ ಮಾಡಲಗಿ  ಇವರ ಹೆಸರು ಇತ್ತು ಎಂದು ಹೇಳಲು ಆಗುವುದಿಲ್ಲ.  ಆತನ ಹೆಸರಿಗೆ ಇರುವ ಉತಾರವನುನ ನೋಡುವ ಸಂಧರ್ಬ ಬಂದಿತ್ತು. ಸದ್ರಿ ಸ್ವತ್ತು ಲಕ್ಷ್ಮಣ ಮಾಡಲಗಿ ಇವರ ಹಿರಿಯರಿಂದ ಬಂದಿತ್ತೊ ಅಥವಾ ಆತನೆ ಖರೀದಿಸಿದ್ದ ಎಂದು ಗೊತ್ತಿಲ್ಲ.



ಲಕ್ಷ್ಮಣ ತೀರಿಕೊಂಡ ನಂತರ ಅವನ ಮಕ್ಕಳಾದ ಕಲ್ಲಪ್ಪಾ, ಮಲ್ಲಪ್ಪಾ, ಯಲ್ಲಪ್ಪಾ, ದುಂಡಪ್ಪಾ ಇವರು ವಾರಸ ಮಾಡಿಸಿರುವ ಬಗ್ಗೆ ದಾಖಲೆಯನ್ನು ಮಾಡಿಸಿರುತ್ತೇನೆ. ದಾವಾ ಆಸ್ತಿಯ ಪಹಣಿ ಪತ್ರದಲ್ಲಿ ಖರೀದಿದಾರರು ಎಂದು 15-20 ಮಂದಿಯ ಹೆಸರು ಇರುತ್ತದೆ ಎಂದರೆ ಸರಿ. ಅವರೆಲ್ಲರನುನ ಈ ದಾವೆಯಲ್ಲಿ ಪಕ್ಷಗಾರರನ್ನು ಮಾಡಿಲ್ಲ ಎಂದರೆ ಸರಿ. ಸದ್ರಿ ದಾವೆಯನುನ ಹಾಕುವ ಕಾಲಕ್ಕೆ ಸದ್ರಿಯವರ ಹೆಸರುಗಳು ಉತಾರಿನಲ್ಲಿ ಇರುವುದು ನನಗೆ ಗೊತ್ತಿತ್ತು ಎಂದರೆ ಸರಿ. ಸದ್ರಿ ಖರೀದಿ ಮಾಡಿರುವ ದಾವಾ ಆಸ್ತಿಯಲ್ಲಿ ಖರೀದಿ ಮಾಡಿದ ತಮ್ಮ ತಮ್ಮ ಆಸ್ತಿಯ ಕಬ್ಜಾದಲ್ಲಿ ಇರುತ್ತಾರೆ ಎಂದರೆ ಸರಿ.  ನಿಪಿ-1 ರಲ್ಲಿ 04 ಎಕರೆ 10 ಗುಂಟೆ ಕ್ಷೇತ್ರಕ್ಕೆ ಕಲ್ಲವ್ವಾ ಮಾಡಲಗಿ ಇವರ ಹೆಸರು ಮತ್ತು 4 ನೇ ಪ್ರತಿವಾದಿಯ ಹೆಸರು ಇರುತ್ತದೆ  ಎಂದರೆ ಸರಿ. ದಾವಾ ಆಸ್ತಿಯ ಉತಾರಿನಲ್ಲಿ ನನ್ನ ತಂದೆ ಮಲ್ಲಿಕಾರ್ಜುನ ಲಕ್ಷ್ಮಣ ಕೋರೆ ಇವರ ಹೆಸರು ಯಾವತ್ತು ನಮೂದು ಇಲ್ಲ ಎಂದರೆ ಸರಿ. ನನ್ನ ತಂದೆ 1993 ರಲ್ಲಿ ತೀರಿಕೊಂಡಿದ್ದು ನಂತರ ನಾವು ಮಲ್ಲಿಕಾರ್ಜುನ ಲಕ್ಷ್ಮಣ ಕೋರೆ ಮತ್ತು ಮಲ್ಲಪ್ಪಾ ಮಾಡಲಗಿ ಇಬ್ಬರು ಒಬ್ಬರೇ ಎಂದು ವಾರಸಾ ಮಾಡಿಕೊಂಡಿರುತ್ತೇವೆ. ಯವ ವರ್ಷದಲ್ಲಿ ಮಾಡಿಕೊಳ್ಳಲಾಗಿದೆ ಎಂದು ಈಗ ನನಗೆ ನೆನಪಿಲ್ಲ. ಸದ್ರಿ ವಾರಸಾ ಮಾಡಿಕೊಂಡಿರುವ ವಿಚಾರ ನನ್ನ ತಾಯಿ ಹೇಳಿರುತ್ತಾರೆ. ಮುಂದುವರೆದು ದಾವಾ ಆಸ್ತಿ ಸಂಬಂಧ ವಾರಸಾ ಮಾಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮಲ್ಲಿಕಾರ್ಜುನ ಲಕ್ಷ್ಮಣ ಕೋರೆ ಜೀವಂತ ಇರುವಾಗ ತಾನೇ ಮಲ್ಲಪ್ಪಾ ಮಾಡಲಗಿ ಎಂದು ದಾವಾ

ಆಸ್ತಿಯಲ್ಲಿ ಪಾಲನ್ನು ಬೇಡಿ ದಾವೆ ಹಾಕಿರುವುದಿಲ್ಲ. ನನ್ನ ತಂದೆ ಮಲ್ಲಿಕಾರ್ಜುನ ಲಕ್ಷ್ಮಣ ಕೋರೆ ಇವರೇ ಮಲ್ಲಪ್ಪಾ ಮಾಡಲಗಿ ಎಂದು ತೋರಿಸಲು ದಾಖಲಾತಿ ನನ್ನ ತಂದೆಯ ಸೇವಾ ಪುಸ್ತಕ ಇರುತ್ತದೆ. ಮಲ್ಲಪ್ಪಾ ಲಕ್ಷ್ಮಣ ಮಾಡಲಗಿ ಇವರು ಹುಕ್ಕೇರಿ ತಾಲೂಕಿನ ಬೆಲ್ಲದ ಬಾಗೇವಾಡಿಯಲ್ಲಿ ದಿನಾಂಕಃ 13-02-1993 ರಲ್ಲಿ ಮೃತ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಲ್ಲಪ್ಪಾ ಲಕ್ಷ್ಮಣ ಮಾಡಲಗಿ ಇವರು ತೀರಿಕೊಂಡ ನಂತರ ಕಲ್ಲಪ್ಪಾ ಲಕ್ಷ್ಮಣ ಮಾಡಲಗಿ ಇವರು ತಾನೊಬ್ಬನೇ ವಾರಸುದಾರರ ಎಂದು ಅರ್ಜಿಯನ್ನು ಸಲ್ಲಿಸಿದ್ದ ಎಂದರೆ ಸರಿ. ಆದರೆ ಅದು ತಪ್ಪು ಇರುತ್ತದೆ. ಆತ ತೀರಿಕೊಂಡ ನಂತರ ಬೆಲ್ಲದ ಬಾಗೇವಾಡಿ ಗ್ರಾಮ ಲೆಕ್ಕಾಧಿಕಾರಿ ಮತ್ತು ಹುಕ್ಕೇರಿಯ ತಹಶೀಲ್ದಾರರು ಪರೀಶೀಲಣೆ ಮಾಡಿ ವಾರಸಾ ಮತ್ತು ಉತ್ತ್ರ ಜೀವಿತ ಪ್ರಮಾಣ ಪತ್ರ ವನ್ನುಕೊಟ್ಟರುತ್ತಾರೆ ಎಂದರೆ ಕೊಟ್ಟಿರುತ್ತಾರೆ ಆದರೆ ಅದು ಸುಳ್ಳು ಇರುತ್ತದೆ ಎನ್ನುತ್ತಾರೆ ಸದ್ರಿ ವಾರಸಾ



ಪ್ರಮಾಣ ಪತ್ರದ ಪ್ರಕಾರ ದಿನಾಂಕಃ21-09-2012 ರಲ್ಲಿ ಮಲ್ಲಪ್ಪಾ ಮಾಡಲಗಿ ಹೆಸರು ಕಡಿಮೆಯಾಗಿ ಕಲ್ಲಪ್ಪಾ ಮಾಡಲಗಿ ಇವರ ಹೆಸರು ದಾಖಲ ಆಗಿರುತ್ತದೆ ಎಂದರೆ ಸಾಕ್ಷಿ ಅದು ತಪ್ಪು ಇರುತ್ತದೆ ಎನ್ನುತ್ತಾರೆ. ಸದ್ರಿ ವಿಚಾರ ನನಗೆ 2015 ರಲ್ಲಿ ಗೊತ್ತಾಗಿರುತ್ತದೆ. ಕಲ್ಲಪ್ಪಾ ಮಾಡಿಕೊಂಡತಹ ವಾರಸಾ ಪ್ರಮಾಣ ಪತ್ರದ ಆಧಾರ ಮೇಲೆ ಡೈರಿ ಆಗಿದ್ದು ಅದರ ಮೇಲೆ ಅಪೀಲು ವೆಗೈರೆ ಸಲ್ಲಿಸಿಲ್ಲ. ವಾರಸಾ ಪ್ರಮಾಣ ಪತ್ರದ ಆಧಾರ ಮೇಲೆ ಯಾವುದೇ ಅಪೀಲು ಸಲ್ಲಿಸಿರುವುದಿಲ್ಲ. ನನ್ನ ಮತ್ತು ನನ್ನ ತಮ್ಮಣ ಶಾಲಾ ದಾಖಾಲಾತಿಗಳಲ್ಲಿ ತಂದೆಯ ಹೆಸರು ಮಲ್ಲಪ್ಪಾ ಮಾಡಲಗಿ ಎಂದು ತೋರಿಸಲು ಯಾವುದೇ ದಾಖಲೆ ಇರವುದಿಲ್ಲ.

ನನ್ನ ತಂದೆ ಮಲ್ಲಿಕಾರ್ಜುನ ಕೋರೆಯಾಗಲಿ, ನಾನಾಗಲಿ ಮತ್ತು ಸಹೋದರರು ಕೂಡಿ ದಾವಾ ಆಸ್ತಿಯಲ್ಲಿ ಜಂಟಿಯಾಗಿ ಕಬ್ಜಾದಲ್ಲಿ ವಹಿವಾಟ ಮಾಡಿದ ಬಗ್ಗೆ ದಾಖಲಾತಿ ಇರುವುದಿಲ್ಲ. 35-40 ವರ್ಷಗಳಿಂದ ನಾವು ಮತ್ತು ನನ್ನ ತಂದೆ ಮಹಾರಾಷ್ಟ್ರದ ಕೋಲಾಪುರದಲ್ಲಿ ಖಾಯಂ ತರಿಖ ವಾಸ ಇದ್ದು ಆದರೆ ಬಂದಿ ಹೋಗಿರುತ್ತೇನೆ. ಕಲ್ಲಪ್ಪಾ ಲಕ್ಷ್ಮಣ ಮಾಡಲಗಿ ಮತ್ತು ಕಲ್ಲವ್ವಾ ಕಲ್ಲಪ್ಪಾ ಮಾಡಲಗಿ ಇವರು 15-20 ಮಂದಿಗೆ ಖರೀದಿ ಕೊಟ್ಟಿದ್ದು ಆ ಬಗ್ಗೆ ನಾನಾಗಲಿ ನನ್ನ ತಂದೆಯಾಗಲಿ ಎಂದು ತಕರಾರು ಮಾಡಿರುವುದಿಲ್ಲ. ದಾವೆಯಲ್ಲಿ ಸ್ವತ್ತಿನ ಚಕ್ಕುಬಂದಿ ಬರೆದಿಲ್ಲ ಎಂದರೆ ಸರಿ. ಸದ್ರಿ ಜಮೀನಿನ ಚಕ್ಕುಬಂದಿ ಈಗಲೂ ಸಹ ನನಗೆ ಹೇಳಲು

ಬರುವುದಿಲ್ಲ. ಕಲ್ಲಪ್ಪಾ ನ ಸಣ್ಣ ತಮ್ಮ ಯಲ್ಲಪ್ಪಾ ಮದುವೆ ಮಾಡಿಕೊಳ್ಳದೇ ತನ್ನ ಹಿಸ್ಸೆಗೆ ಬಂದಂತಹ ಸ್ವತ್ತನು ಕಲ್ಲಪ್ಪಾಗೆ ಮಾಡುವಂತೆ 2001 ರಲ್ಲಿ ರೆವೆನ್ಯೂ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ

ಸದ್ರಿ ಡೈರಿಯ ಪ್ರಕಾರ ಕಲ್ಲಪ್ಪಾನ ಹೆಸರು ದಾಖಲ ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಕಲ್ಲಪ್ಪಾನ ಇನ್ನೊಬ್ಬ ಸಹೋದರ ದುಂಡಪ್ಪಾ ಇವನು ತೀರಿಕೊಂಡ ನಂತರ 03 ಗುಂಟೆ ಜಮೀನಿಗೆ ಅವನ ಹೆಂಡತಿ ಮತ್ತು ಮಕ್ಕಳ ಹೆಸರು ಹಚ್ಚಿಸಿಕೊಂಡ ವಿಚಾರ ನನಗೆ ಗೊತ್ತಿಲ್ಲ . ನಿಪಿ-2 ಆರ್ ಟಿ ಸಿ ಉತಾರಿನಲ್ಲಿ ನಮೂದು ಇರುವ ಎಲ್ಲರ ಹೆಸರುಗಳನ್ನು ನನಗೆ ಹೇಳಲು ಬರುವುದಿಲ್ಲ. ಅಸಲು ದಾವಾ ಸಂಖ್ಯೆ 68/2014 ರಂತೆ ಯಲ್ಲಪ್ಪಾ ಹಾಕಿರುವ ದಾವೆಯಲ್ಲಿ ನಾನು ಹಾಜರ ಆಗಿರುತ್ತೇನೆ. ಸದ್ರಿ ದಾವೆಯಲ್ಲಿ ನಾವು ಮಲ್ಲಪ್ಪಾ ಮಾಡಲಗಿಯ ಮಕ್ಕಳು ಇದ್ದು ನಮಗೂ ಹಿಸ್ಸೆ ಇರುತ್ತದೆ ಎಂದು ಹೇಳಿ ಕೈಪಿಯತನ್ನು ಸಲ್ಲಿಸಿಲ್ಲ. ಅಂತಹ ದಾವೆಯಲ್ಲಿ ನಮ್ಮನ್ನೇ ವಾದಿಯನ್ನಾಗಿ ಮಾಡಿಕೊಳ್ಳಲು ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ. ಸದ್ರಿ ದಾವೆ 2016 ರಲ್ಲಿ ವಜಾ



ಆಗಿರುತ್ತದೆ. ನಾವು ಹಾಜರು ಪಡೆಸಿರುವ ನಿಪಿ-5 ಮತ್ತು 6 ಕಾಗದ ಪತ್ರ ಗಳನ್ನು ಪಡೆಯಲು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಈ ಮೊದಲು ಯಲ್ಲಪ್ಪಾ ಸಲ್ಲಿಸಿದ ದಾವೆಯಲ್ಲಿ ನಾನು ಯಾವ ವಕೀಲರ ಮೂಲಕ ಹಾಜರಾಗಿದ್ದೆ ಎಂದು ಈಗ ನೆನಪಿಲ್ಲ.

ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದುಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ